**KARNATAKA GOVERNMENT**
**(MINOR IRRIGATION DEPARTMENT)**

E-mails address: aeemisd.gadag@gmail.com
Phone no: 08372-220236
New DC Office Room No:207(2nd floor)

ಕಾರ್ಯಾಲಯ
ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ,
ಉಪ ವಿಭಾಗ, ಗದಗ

ನಂ/ಸಕಾಇಂ/ಸನೀಅಂಅಉವಿ/ಗದಗ/ಸಿಂಗಟರಾಯನಕೆರೆ/ 2022-23/ 554 ದಿನಾಂಕ:07.06.2022.

ಇವರಿಗೆ,
ಅರಣ್ಯ ಉಪ ಸಂರಕ್ಷಣಾಧಿಕಾರಿಗಳು,
ಗದಗ ವಿಭಾಗ,
ಗದಗ.

ಮಾನ್ಯರೇ,

ವಿಷಯ: ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಸಿಂಗಟರಾಯನಕೆರೆ ಹತ್ತಿರ ಇರುವ ಸಣ್ಣ ನೀರಾವರಿ ಕೆರೆಗೆ ಶಿಂಗಟಾಲೂರ ಏತ ನೀರಾವರಿ ಯೋಜನೆ ಮೂಲಕ ಕೆರೆಗೆ ನೀರು ತುಂಬಿಸುವ ಕಾಮಗಾರಿ.

ಉಲ್ಲೇಖ: ವಿಭಾಗ ಕಛೇರಿ ಒಪ್ಪಂದ ಪತ್ರ ಸಂಖ್ಯೆ: 107 ದಿನಾಂಕ: 14.01.2019.

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಸಿಂಗಟರಾಯನಕೆರೆಗೆ ಏತ ನೀರಾವರಿ ಮೂಲಕ ನೀರು ತುಂಬಿಸುವ ಕಾಮಗಾರಿ ಒಂದು ಮಹತ್ವಾಕಾಂಕ್ಷೆ ಯೋಜನೆಯಾಗಿದ್ದು, ಸದರಿ ಯೋಜನೆಯು ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಮಂಜೂರಾಗಿದ್ದು, ಸದರಿ ಯೋಜನೆಯಿಂದ ಸುಮಾರು 17.00 ಹೆಕ್ಟರ್ ಪ್ರದೇಶ ಪರೋಕ್ಷವಾಗಿ ನಿರಾವರಿಯಾಗುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿ ಇರುತ್ತದೆ.

ರೈಸಿಂಗ್ ಮೇನ್, ತ್ರಸ್ಟ್ ಬ್ಲಾಕ್ ಮತ್ತು ಡಿ.ಸಿ ಚೇಂಬರ್‌ಗಳನ್ನು ಅನುಮೋದಿತ ಟೆಂಡರ್ ಪ್ರಕಾರ ರಸ್ತೆಯ ಪಕ್ಕ ಹಾಕಿಕೊಂಡು ಹೋಗಲಾಗುತ್ತಿದೆ. ಆದರೆ ಸುಮಾರು 900 ಮೀ ರೈಸಿಂಗ್ ಮೇನ್, ಅರಣ್ಯ ಪ್ರದೇಶದಲ್ಲಿ ಹಾದು ಹೋಗಬೇಕಾಗಿರುತ್ತದೆ. ಈಗಾಗಲೇ ಆ ಪ್ರದೇಶದಲ್ಲಿ ನೀರಿನ ಪೈಪ್ ಲೈನ್ ರಸ್ತೆ ಪಕ್ಕದಲ್ಲಿ ಹಾದು ಹೋಗಿರುತ್ತದೆ ಮತ್ತು ಸದರಿ ಪ್ರದೇಶದಲ್ಲಿ ಅರಣ್ಯಕ್ಕೆ ಸಂಬಂಧಿಸಿದ ಗಿಡ ಗಂಟೆಗಳನ್ನು ನಾಶನ ಮಾಡದಂತೆ ಪ್ರದೇಶ 0.0576 ಹೆಕ್ಟರ್ ಅರಣ್ಯಾ ಪ್ರದೇಶ ಅವಶ್ಯಕತೆ ಇರುತ್ತದೆ. ಸದರಿ ವಿಷಯವಾಗಿ ಉಲ್ಲೇಖಿತ ಪ್ರಸ್ತಾವಣೆಯನ್ನು ಅರಣ್ಯ ಇಲಾಖೆ ವೆಬ್‌ಸೈಟ್‌ನಲ್ಲಿ ಈಗಾಗಲೇ ಅಪ್‌ಲೋಡ್ ಮಾಡಿ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡಿಕೊಳ್ಳಲಾಗಿದೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಅರಣ್ಯ ಭವನ, ಬೆಂಗಳೂರು ಇವರ Online Submission& Monitoring of forest clearance Preparation FP/KA/Pipeline/154978/2022 ಪ್ರವೇಶ ಪೋರ್ಟಲ್‌ನಲ್ಲಿ ತಿಳಿಸಿದಂತೆ ಪರಿಶೀಲನೆಗೊಳಿಸಿದೆ. ಎಲ್ಲ ದಾಖಲೆಗಳ ಹಾರ್ಡ ಕಾಪಿಗಳ ಮೂಲ ಪ್ರತಿಗಳನ್ನು ತಮ್ಮ ದಯಾಪರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಅಡಕ: Forest Clearance Praposal-7 Set

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು,
ಸನೀ ಮತ್ತು ಅಂಅ, ಉಪ ವಿಭಾಗ, ಗದಗ

Deputy Conservator of Forests
GADAG
582 101
8-6-22
Gadag Division

ಪ್ರತಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಜಿಲ್ಲಾ ಆಡಳಿತ ಭವನ, ಗದಗ ರವರ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.

ಸ್ವೀಕೃತಿ ಶಾಖೆ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಗದಗ
ದಿ: 08/06/2022

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು,
ಸನೀ ಮತ್ತು ಅಂಅ, ಉಪ ವಿಭಾಗ, ಗದಗ